ನೀರಾವರಿ ಪ್ರದೇಶದ ರಸ್ತೆಗಳ ಉಸ್ತುವಾರಿ ಬಗ್ಗೆ

೪೨೨. ಶ್ರೀ ಕರಿಯಣ್ಣ (ಹೊಳೆಹೊನ್ನೂರು). — ಮಾನ್ಯ ಲೋಕೋಪಯೋಗಿ, ಮತ್ತು ನೀರಾವರಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೀರಾವರಿ ಪ್ರದೇಶದ ರಸ್ತೆಗಳ ಉಸ್ತುವಾರಿಗಾಗಿ ಕೊಡುತ್ತಿರುವ ಹಣ ಈಗಿನ ಪರಿಸ್ಥಿತಿಯಲ್ಲಿ ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ವಿಚಾರದಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ನೀರಾವರಿ ಪ್ರದೇಶದ ರಸ್ತೆಗಳ ಉಸ್ತುವಾರಿಗಾಗಿ ಕಿಲೋಮೀಟರ್ ಅನುಸಾರವಾಗಿ ಕೊಡಲಾಗುತ್ತಿರುವ ಹಣ ಈಗಿನ ಪರಿಸ್ಥಿತಿಯಲ್ಲಿ ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಲಭ್ಯವಿರುವ ಅನುದಾನದಲ್ಲಿ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲಂ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಕಬ್ಬು ಬೆಳೆಯುವ ನೀರಾವರಿ ಪ್ರದೇಶದಲ್ಲಿ ಶುಗರ್‌ಕೇನ್ ಸೆಸ್ಸನ್ನು ವಸೂಲಿ ಮಾಡುತ್ತಿರುವ ಬಗ್ಗೆ

೪೨೦. ಕರಿಯಣ್ಣ (ಹೊಳೆಹೊನ್ನೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಕಬ್ಬು ಬೆಳೆಯುವ ನೀರಾವರಿ ಪ್ರದೇಶದಲ್ಲಿ ಶುಗರ್‌ಕೇನ್ ಸೆಸ್ಸನ್ನು ವಸೂಲಿ ಮಾಡಲಾಗುತ್ತಿದೆಯೆ, ಅದನ್ನು ಆ ಪ್ರದೇಶದ ರಸ್ತೆ ರಿಪೇರಿಗೆ ಉಪಯೋಗಿಸುತ್ತಿರುವುದು ನಿಜವಲ್ಲವೇ?

೨) ಹಾಗಿದ್ದಲ್ಲಿ, ಸದರಿ ಹಣದಿಂದ ಈ ಪ್ರದೇಶದ ರಸ್ತೆ ದುರಸ್ತಿ ಕಾರ್ಯಂಗಾರಿಯನ್ನು ಯಾವ ಇಲಾಖೆಗೆ ಕೊಡಲಾಗುತ್ತಿದೆ?

೩) ಈ ಸೆಸ್ಸಿನ ವಸೂಲಿಯನ್ನು ನಿಲ್ಲಿಸಿದ್ದರೆ ಯಾವ ವರ್ಷಿಕ ಸಾಲಿನಿಂದ ನಿಲ್ಲಿಸಲಾಗಿದೆ? ವಸೂಲು ಮಾಡದಿರಲು ಕಾರಣವೇನು ಹಾಗು ಪರ್ಯಾಯ ವ್ಯವಸ್ಥೆ ನಿಲ್ಲಿಸಲು ಕಾರಣಗಳೇನು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

೧) ವಸೂಲಿ ಮಾಡುತ್ತಿಲ್ಲ.

೨) ಮೇಲಿನ ಕಾರಣದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

೩) ೧೯೬೯-೭೦ರಲ್ಲಿ ಶುಗರ್‌ಕೇನ್ ಸೆಸ್‌ನ ವಸೂಲಿಯನ್ನು ನಿಲ್ಲಿಸಲಾಯಿತು. ೧೯೫೮ನೇ ಮೈಸೂರು ಶುಗರ್‌ಕೇನ್ ಸೆಸ್ ಆಕ್ಟ್‌ನ ಕೆಲವು ಕಲಂಗಳನ್ನು ಅಲ್ಟ್ರಾವೈರಸ್ ಎಂದು ಘೋಷಣೆ ಮಾಡಲಾಯಿತು. ಹಾಗೂ ಶುಗರ್‌ಕೇನ್ ಸೆಸ್‌ನಿಂದ ಸರ್ಕಾರಕ್ಕೆ ಉತ್ಪನ್ನ ಕಡಿಮೆ ಆಗಿದ್ದುದರಿಂದ ಇದನ್ನು ಹೆಚ್ಚಿಸುವ ಸಲುವಾಗಿ ಶುಗರ್‌ಕೇನ್ ಸೆಸ್ ಬದಲಿಗೆ ಪರ್ಚೇಸ್ ಟ್ಯಾಕ್ಸನ್ನು ವಿಧಿಸಲಾಗುತ್ತಿದೆ.

ಗೊಂದಿ ನಾಲೆಯಲ್ಲಿ ಹೂಳುತುಂಬಿರುವ ಬಗ್ಗೆ

೪೨೩. ಶ್ರೀಕರಿಯಣ್ಣ (ಹೊಳೆಹೊನ್ನೂರು).— ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ಬರುವ ಗೊಂದಿ ನಾಲೆಯಲ್ಲಿ ಹೂಳು ತೆಗೆಯದಿರುವುದರಿಂದ ಸುಮಾರು ೨೦ ಸಾವಿರ ಎಕರೆ ಪ್ರದೇಶದ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯದೆ ತೊಂದರೆಯಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೆ?

ಆ) ಹೂಳು ತೆಗೆಯಲು ಅಂದಾಜು ತಯಾರು ಮಾಡಲಾಗಿದೆಯೆ. ಹಾಗಿದ್ದಲ್ಲಿ ಅಂದಾಜು ಎಷ್ಟು?